1) ಒಟ್ಟು 15 ಗ್ರಾಮಗಳು 'ಬೆಳ್ಳಿಬೆಳಕು' ಕಾರ್ಯಕ್ರಮದಲ್ಲಿ ಸೇರಿವೆ. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ. 170.49 ಲಕ್ಷ ಬಿಡುಗಡೆ ಮಾಡಲಾಗಿದೆ.

2) ನೆಲಮಂಗಲ ಮತಕ್ಷೇತ್ರದಲ್ಲಿ ಈ ಕಾರ್ಯಕ್ರಮದಡಿ ಯಾವುದೇ ಗೊಲ್ಲರಹಟ್ಟಿಗಳು ಸೇರಿರುವುದಿಲ್ಲ.

ಗುಡಿ ಕೈಗಾರಿಕೆಗಳು ಕಣ್ಮರೆಯಾಗುತ್ತಿರುವುದರ ಬಗ್ಗೆ.

247(571)

ಶ್ರೀ ಅಂಗಾರ ಎಸ್.(ಸೂಳ್ಯ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಾಂದೀಜಿಯವರ ''ಗ್ರಾಮೋದಯ'' ಕಲ್ಪನೆಯ ಗುಡಿ ಕೈಗಾರಿಕಾಗಳಲ್ಲೊಂದಾದ ''ಕುಂಬಾರಿಕೆ'' ಮಡಕೆ ವೃತ್ತಿ ಕೆಲಸ ಕಣ್ಮರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ತಲತಲಾಂತರದ ವಂಶಪಾರಂಪರಿಕ ಕಸುಬು ನಶಿಸಿಹೋಗದಂತೆ ಯಾವ ಮುಂಜಾಗರೂಕ ಕ್ರಮ ಕೈಗೊಳ್ಳಲಾಗುವುದು?

ಇ) ಗ್ರಾಮೋದ್ಯೋಗ ಕಾಪಾಡುವ ದಿಕ್ಕಿನಲ್ಲಿ ಈ ಸಮುದಾಯಕ್ಕೆ ಸರ್ಕಾರದ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲಾಗುವುದೇ?

ಈ) ಸದರಿ ಸೌಲಭ್ಯ ಹಾಗೂ ಸಹಾಯಗಳಾವುವು (ವಿವರ ಪಟ್ಟಿ ಲಗತ್ತಿಸಿ)?

ಉ) ಯಾವ ಯಾವ ಇಲಾಖೆಯಿಂದ ಈ ಪ್ರಯೋಜನ ಫಲಾನುಭವಿಗಳಿಗೆ ಲಭ್ಯವಾಗುತ್ತಿದೆ ಮತ್ತು ಸರ್ಕಾರದ ಈ ನೆರವಿನಿಂದ ''ಕುಂಬಾರ ಕಲೆ'' ಜೀವಂತವಾಗಿರಲು ಅನುಕೂಲವಾಗುವುದಿಲ್ಲವೇ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು):

ಅ) ಬಂದಿದೆ.

ಆ) ಸರ್ಕಾರವು ಆಧುನಿಕ ಶೈಲಿಯಲ್ಲಿ ಕಲಾತ್ಮಕ ಗೃಹೋಪಯೋಗಿ ವಸ್ತುಗಳನ್ನು ತಯಾರಿಸಲು ಉತ್ತೇಜನ ನೀಡಿ, ಇಂದಿನ ಜನರಿಗೆ ಅವರಿಗೆ ಬೇಕಾದ ರೀತಿಯಲ್ಲಿ

ಸರಬರಾಜು ಮಾಡಲು ವ್ಯವಸ್ಥೆಗೊಳಿಸಲಾಗುತ್ತಿದೆ.

ಇ) ಸರ್ಕಾರ ಕುಂಬಾರಿಕೆ ವಸ್ತುಗಳ ಮಾರಾಟಕ್ಕಾಗಿ ಪ್ರತೀ ಜಿಲ್ಲೆಯಲ್ಲಿ ಜಿಲ್ಲಾ ಸಹಕಾರ ಮಾರಾಟ ಸಂಘ(ಡಿಎಸ್‌ಎಂಎಸ್)ಗಳ ಮುಖಾಂತರ ಮಾರಾಟ ವ್ಯವಸ್ಥೆ ಕಲ್ಪಿಸಿದೆ.

ಈ) ಖಾನಾಪುರ ಹಾಗೂ ರಾಮನಗರಗಳಲ್ಲಿ ತರಬೇತಿ ಕೇಂದ್ರಗಳಿದ್ದು, ಕೌಶಲ್ಯ ಅಭಿವೃದ್ಧಿಯ ಬಗ್ಗೆ ತರಬೇತಿ ನೀಡಲಾಗುತ್ತಿದೆ.

ಎಲ್ಲಾ ಕಸುಬುದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಕಾಮನ್ ಫೆಸಿಲಿಟೀಸ್‌ಗಳನ್ನು ಕ್ಲಸ್ಟರ್ ಅಭಿವೃದ್ಧಿ ಯೋಜನೆಯಡಿ ಒದಗಿಸಲು ಸಂಘ: ಸಂಸ್ಥೆಗಳ ಮುಖಾಂತರ ಕ್ರಮ ವಹಿಸಲಾಗುತ್ತಿದೆ.

ಉ) ಕುಂಬಾರಿಕೆ ಕಲೆ ಜೀವಂತವಾಗಿಡಲು ಅನುಕೂಲವಾಗುವಂತೆ ಸರ್ಕಾರವು ಈ ಕೆಳಕಂಡ ನಿಗಮ: ಮಂಡಳಿಗಳಿಂದ ಧನ ಸಹಾಯ ಸೌಲಭ್ಯಗಳನ್ನು ನೀಡುತ್ತಿದೆ.

(1) ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ.

(2) ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

(3) ರಾಜ್ಯ ಹಣಕಾಸು ಸಂಸ್ಥೆ, ಮತ್ತು

(4) ಕರ್ನಾಟಕ ಕರಕುಶಲ ಅಭಿವೃದ್ಧಿನಿಗಮ (ನಿ)

ಇವುಗಳಿಂದ ಧನಸಹಾಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಪರಿಶಿಷ್ಟಜಾತಿ : ಪರಿಶಿಷ್ಟ ಜನಾಂಗದ ವಿದ್ಯಾರ್ಥಿ ವಸತಿಗೃಹಗಳು.

249(559)

ಶ್ರೀ ಬನ್ನಿಕೋಡ್ ಬಿ.ಹೆಚ್(ಹಿರೇಕೆರೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪರಿಶಿಷ್ಟಜಾತಿ : ಪರಿಶಿಷ್ಟಜನಾಂಗದ ವಸತಿ ನಿಲಯಗಳು ಎಷ್ಟು;

ಆ) ರಾಜ್ಯದಲ್ಲಿ ಈ ಎಲ್ಲಾ ವಸತಿ ನಿಲಯಗಳಿಂದ ಎಷ್ಟು ವಿದ್ಯಾರ್ಥಿಗಳಿಗೆ ಈ